

# ಕೃಷಿಕರ ಕೈಗಳಲ್ಲಿ ಅರಳುವ ಮಂಟಪ

ಮದುವೆ ಮನೆ ಎಂದರೆ ಅಲ್ಲಿ ಮಂಟಪ, ಸಭಾಂಗಣದ ಅಲಂಕಾರ ಎಲ್ಲವೂ ಅಚ್ಚುಕಟ್ಟಾಗಿರಬೇಕು. ದುಬಾರಿ ಹಣ ತೆತ್ತು ಮಂಟಪಗಳ ಅಲಂಕಾರ ಮಾಡಿಸುವ ಶ್ರೀಮಂತರು ಒಂದೆಡೆಯಾದರೆ ತಮ್ಮ ಸಂಬಂಧಿಕರಲ್ಲೇ ಕಲಾತ್ಮಕವಾಗಿ ಮಂಟಪ ತಯಾರು ಮಾಡಿಸಿ ಮದುವೆ ಮಾಡುವ ಮಧ್ಯಮ ವರ್ಗದವರೂ ಇದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ 'ಅಲಂಕಾರ ಬಳಗ' ಕೃಷಿಕರಿಂದಲೇ ಕೂಡಿದ್ದು, ಮದುವೆ ಮಂಟಪವನ್ನು ಕಲಾತ್ಮಕವಾಗಿ ರಚಿಸುವ ಕಾಯಕದಲ್ಲಿ ನಿರತವಾಗಿದೆ.

■ ಚಿತ್ರ– ಬರಹ: **ಗಣಪತಿ ಹಾಸ್ಪುರ**

ಈ ಹೈಟೆಕ್ ಜೀವನ ಶೈಲಿಯಲ್ಲಿ ಕೊಂಡುಕೊಳ್ಳುವ 'ವಸ್ತು'ಗಳು ಆಕರ್ಷಕವಾಗಿ ಕಂಡಾಗ ಮಾತ್ರವೇ ಅವುಗಳನ್ನು ಖರೀದಿಸಲು ಜನಸಾಮಾನ್ಯರು ಆಸಕ್ತಿ ವಹಿಸುತ್ತಾರೆ. ಮತ್ತೆ ಅವುಗಳಿಗೆ ಉತ್ತಮ ಬೇಡಿಕೆಯೂ ಇದೆ ಎನ್ನುತ್ತಾರೆ ಅನುಭವಿಗಳು. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಸಭಾ ಕಾರ್ಯಕ್ರಮದ ವೇದಿಕೆ, ಮದುವೆ ಮಂಟಪ, ಚೌತಿ ಹಬ್ಬದ ಮಂಟಪ.. ಇಂಥ ವಿಶೇಷ ಸಂದರ್ಭ, ಕಾರ್ಯಗಳಲ್ಲಿ 'ಆಕರ್ಷಕ ಮಂಟಪ' ಸಿದ್ಧಪಡಿಸುವ ಪದ್ಧತಿ ಈಗ ಹೆಚ್ಚತೊಡಗಿದೆ. ಇಂಥಹ ವೈವಿಧ್ಯಮಯ ಮಂಟಪ, ವೇದಿಕೆಯನ್ನು ಸಿದ್ಧಮಾಡುವ ಹವ್ಯಾಸಿ ಕಲಾವಿದರೂ ಅಲ್ಲಲ್ಲಿ ಇದ್ದಾರೆ. ಅವರಲ್ಲಿ ಉ.ಕ. ಜಿಲ್ಲೆಯ ಶಿರಸಿ ತಾಲೂಕಿನ 'ಅಲಂಕಾರ ಬಳಗ'ವು ಒಂದು.

ಈ ಬಳಗದಲ್ಲಿರುವ ಕಲಾವಿದರು ಕೃಷಿಕರು. ಅವರು ತಮ್ಮ ಬಿಡುವಿನ ಸಮಯದಲ್ಲಿ ಆಕರ್ಷಕವಾದ ತರತರದ ಮಂಟಪ ನಿರ್ಮಿಸುವುದಲ್ಲಿ ಸಿದ್ಧಹಸ್ತರು. ಅಲಂಕಾರ ಬಳಗದಲ್ಲಿ ಶ್ರೀಧರ್ ಜಡ್ಡಿಮನೆ, ಶ್ರೀನಿವಾಸ ಬಾಳೆಗದ್ದೆ, ಸೀತಾರಾಮ ಹೆಗಡೆ, ಸತೀಶ ಹೆಗಡೆ, ರವೀಂದ್ರ ಹೆಗಡೆ ಮುಂತಾದವರು ಇದ್ದಾರೆ. ಇವರೆಲ್ಲಾ ಸೇರಿಕೊಂಡು ತಮ್ಮ ಕೈಚಳಕದಿಂದ ವೈವಿಧ್ಯಮಯ ವೇದಿಕೆ, ಮಂಟಪಗಳನ್ನು ಕಳೆದ ಮೂರ್ನಾಲ್ಕು ವರ್ಷಗಳಿಂದ ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಕೃಷಿ ಚಟುವಟಿಕೆಗಳಲ್ಲಿ ಮೈಮುರಿದು ಶ್ರಮಿಸುವ ಈ ಹವ್ಯಾಸಿ ಕಲಾವಿದರು ಸೀಜನ್ನಿನ ಸಮಯದಲ್ಲಿ ಆಕರ್ಷಕ ಮಂಟಪ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಶ್ಲಾಘನೀಯ.



ಈ ಕೃಷಿ ಕಲಾವಿದರು ಬಿದಿರು, ಬಟ್ಟೆ, ಫ್ಲೆಕ್ಸ್ ಬೋರ್ಡ್, ಥರ್ಮಾಕೋಲ್... ಇನ್ನಿತರ ಪರಿಕರಗಳನ್ನು ಬಳಸಿಕೊಂಡು ಮದುವೆ ಮಂಟಪ, ಬ್ರಹ್ಮೋಪದೇಶದ ವಟುವಿನ ಮಂಟಪ, ಸಭಾ ವೇದಿಕೆಯನ್ನು ಕಲಾತ್ಮಕವಾಗಿ ಕಟ್ಟುತ್ತಾರೆ. ಅವರು ವಿಶೇಷ ಕಾರ್ಯದ ಮಂಟಪ, ವೇದಿಕೆಗಳನ್ನು ಮನೋಜ್ಞವಾಗಿ ನಿರ್ಮಿಸುವುದನ್ನು ರೂಢಿಸಿಕೊಂಡಿದ್ದಾರೆ. ಈ ಕೃಷಿ ಕಲಾವಿದರು ತಮ್ಮ ಕಲ್ಪನೆ, ಆಳವಾದ ವಿಚಾರದಿಂದ ಸೂಕ್ಮವಾಗಿ ನಿರ್ಮಿಸುವ ಮಂಟಪ, ವೇದಿಕೆಯನ್ನು ನೋಡಲು ಎರಡು ಕಣ್ಣು ಸಾಲದೇನೋ ಅನ್ನಿಸುವುದು ಉಂಟು. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕು ಅನ್ನುವ ತವಕ. ಉತ್ಸಾಹ ಇಮ್ಮಡಿಸುತ್ತದೆ.

'ಈಗಾಗಲೇ ಅನೇಕ ಮದುವೆ, ಬ್ರಹ್ಮೋಪದೇಶ, ಸಭಾ ವೇದಿಕೆಗಳಲ್ಲಿ ಆಕರ್ಷಕ ಮಂಟಪ ನಿರ್ಮಿಸಿದ ಹೆಗ್ಗಳಿಕೆ ಈ ಬಳಗದ್ದು. 2011ರ ಕದಂಬೋತ್ಸವ, 2014ರಲ್ಲಿ ಶಿರಸಿಯಲ್ಲಿ ನಡೆದ ಇತಿಹಾಸ ಸಮ್ಮೇಳನ ಪರ್ಯಾಯ ಜಿಲ್ಲಾ ಸಾಹಿತ್ಯ ಸಮ್ಮೇಳನ, ಲಯನ್ಸ್ ಪದಗ್ರಹಣದ ಕಾರ್ಯಕ್ರಮ, ಕೆರೆ ಸಮ್ಮೇಳನ... ಮುಂತಾದ ವಿಶೇಷ ಕಾರ್ಯಕ್ರಮಗಳಲ್ಲಿ ಆಕರ್ಷಕ ವೇದಿಕೆ ನಿರ್ಮಿಸಿದ್ದಾರೆ. ಅಲ್ಲದೆ 'ಬ್ರಹ್ಮರ್ಷಿ' ಎಂಬ ಧಾರಾವಾಹಿ ಚಿತ್ರೀಕರಣಕ್ಕೆ ಪರ್ಣಕುಟೀರವನ್ನು ಕಟ್ಟಿಕೊಟ್ಟಿದ್ದಾರೆ. ಅವಕಾಶ ಸಿಕ್ಕಿದರೆ ನಾಡಿನ ಯಾವುದೇ ಊರಿನಲ್ಲಾದರೂ ಯಾವುದೇ ಸಂದರ್ಭದ ವೇದಿಕೆ, ಮಂಟಪವನ್ನು ಕಟ್ಟಿಕೊಡಲು ಸಿದ್ಧರಿದ್ದೇವೆ. ಆ ಅವಕಾಶವನ್ನೇ ಕಾಯುತ್ತಿದ್ದೇವೆ' ಎಂದು ಅಲಂಕಾರ ಬಳಗದ ನೇತಾರರು ವಿಶ್ವಾಸ ವ್ಯಕ್ತಪಡಿಸುತ್ತಾರೆ. ■